ಇಂದು ದಿ**: 23.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

<u>ಪಾಟೀ ಸವಾಲು **:** ವಾದಿಗಳ ಪರ ಶ್ರೀ ಎಸ್.ಎಂ**.** ವಕೀಲರಿಂದ**,**</u>

ಸರ್ವೆ ನಂಬರ್.100 ರ ಜಮೀನು ನಮ್ಮ ತಂದೆಯ ಜಮೀನು ಎಂದು ವಾದಿಯರು ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಆಸ್ತಿ 1 ನೇ ವಾದಿಯ ಗಂಡ ನಾಗೇಶಪ್ಪ ಇವನಿಗೆ ದರಖಾಸ್ತು ಮೂಲಕ ಬಂದಿರುತ್ತದೆ ಎಂದರೆ ನಿಜ. 1959-1960 ರಲ್ಲಿ ನಾಗೇಶಪ್ಪನಿಗೆ ಮಂಜೂರು ಆಗಿರುತ್ತದೆ. ಜಮೀನನ್ನು ಮಂಜೂರು ಮಾಡುವ ಮೊದಲು ಪರಭಾರೆ ಮಾಡಬಾರದು ಎಂಬ ಷರತ್ತು ಹಾಕಿದ್ದರು ಎಂದರೆ ಸಾಕ್ಷಿ, ನೋಡಿಲ್ಲ ಎನ್ನುತ್ತಾರೆ. ಸದರಿ ದಾಖಲೆಯನ್ನು ನೋಡಲು ತೊಂದರೆ ಏನು ಇರಲಿಲ್ಲ. ಸದರಿ ಜಮೀನನ್ನು ಮಾರಾಟ ಮಾಡಿರುವುದು ಅಕ್ರಮ ಎಂದು ದಾವಣಗೆರೆ ಎ.ಸಿ. ನ್ಯಾಯಾಲಯ ದಿ 15.10.1982 ರಲ್ಲಿ ಆದೇಶ ಮಾಡಿರುತ್ತದೆ ಎಂಬುದು ಗೊತ್ತಿರುವುದಿಲ್ಲ. ಆ ಕುರಿತು ಕ್ರಮ ತೆಗೆದುಕೊಳ್ಳುವಂತೆ ತಹಶಿಲ್ದಾರ ರವರಿಗೆ ಎ.ಸಿ.ಯವರು ಪಾವತಿ ಪತ್ರವನ್ನು ಕಳುಹಿಸಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ.ಆ ರೀತಿ ಪತ್ರ ಬಂದರೂ ಸಹ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ತಂದೆ ತಹಶಿಲ್ದಾರ್ ಗೆ ಆಮೀಶಕ್ಕೆ ಒಳಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ದಿ: 28.08.1967 ರಲ್ಲಿ ನಮ್ಮ ತಂದೆ ಖರೀದಿ ಮಾಡಿರುತ್ತಾನೆ. ನಮ್ಮ ತಂದೆ ಖರೀದಿ ಮಾಡಿದಾಗ ಸರ್ಕಾರದವರು ಹಾಕಿದ ನಿಬಂಧನೆ ಮುಕ್ತಾಯಗೊಂಡಿರಲಿಲ್ಲ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಜಮೀನನ್ನು ಕ್ರಯ ಮಾಡುವಾಗ ನಾಗೇಶಪ್ಪನ ಆರೋಗ್ಯ ಹೇಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡುವ ಪೂರ್ವದಲ್ಲಿ ಯಾವ ನಿಬಂಧನೆಯ ಮೇಲೆ ಕ್ರಯ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಆ ನಿಬಂಧನೆ ಇದ್ದ ಕಾರಣ 1982 ರವರಗೆ ಪಹಣಿಯಲ್ಲಿ ನಾಗೇಶಪ್ಪನ ಹೆಸರು ಮುಂದುವರೆದಿರುತ್ತದೆ ಎಂದರೆ ಸಾಕ್ಷಿ, ಇರಬಹುದು ಎನ್ನುತ್ತಾರೆ. ಸದರಿ ಜಮೀನಿನ ಮೇಲೆ ತೆಗೆದುಕೊಂಡಿದ್ದ ಸಾಲವನ್ನು ಮರುಪಾವತಿ ಮಾಡಿದ ನಂತರ, ಮರುಕ್ರಯ ಮಾಡಬೇಕೆಂದು ನಿಬಂಧನೆ ಇತ್ತು ಎನ್ನುವುದು ಗೊತ್ತಿರುವುದಿಲ್ಲ.

ದಾವಾ ಆಸ್ತಿಯ ಸ್ವಾಧೀನವನ್ನು ನಮ್ಮ ತಂದೆಗೆ ನಾಗೇಶಪ್ಪ ಬಿಟ್ಟುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನವನ್ನು ನಮ್ಮ ತಂದೆಗೆ ನಾಗೇಶಪ್ಪ ಯಾವ ವ್ಯಕ್ತಿಯ ಸಮಕ್ಷಮ ಬಿಟ್ಟುಕೊಟ್ಟಿರುತ್ತಾರೆ ಗೊತ್ತಿರುವುದಿಲ್ಲ. ನಾಗೇಶಪ್ಪ ಮೃತಪಟ್ಟ ನಂತರ ಅವನ ಹೆಂಡತಿ ಮಕ್ಕಳಿಗೆ ಮೋಸ ಮಾಡುವ ಸಲುವಾಗಿ ನಾಗೇಶಪ್ಪ ಸ್ವಾಧೀನ ಕೊಟ್ಟಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ನಾವೆ ಮಾಲಕರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗೇಶಪ್ಪ ಸಾಲವನ್ನು ತೀರಿಸಿದ ನಂತರ ಕ್ರಯ ಪತ್ರವನ್ನು ನಾಗೇಶಪ್ಪನಿಗ ವಾಪಸ್ಸು ಕೊಟ್ಟಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣದಿಂದ

ನಾವು ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಮೂಲ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾಗೇಶಪ್ಪ ಸಾಲ ತೀರಿಸಿದ ನಂತರ ನನ್ನ ತಂದೆ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಮ್ಮ ತಂದೆ ಹೆಸರಿಗೆ ಖಾತೆ ಇದ್ದುದ್ದರ ದುರುಪಯೋಗ ಪಡೆದು, ನಮ್ಮ ತಂದೆ ಮೃತಪಟ್ಟ ನಂತರ ನಾವು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿ ವಾದಿಗಳು ಇರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.